# ಹದಿಹರೆಯವಿದು, ಜೋಕೆ!

ಹದಿಹರೆಯ ದೈಹಿಕವಾಗಿಯೂ, ಮಾನಸಿಕವಾಗಿಯೂ ಹಲವು ತುಮುಲಗಳನ್ನು ಸಹಜವಾಗಿಯೇ ತಂದೊಡ್ಡುವ ಕಾಲ. ದೇಶದ ಅರ್ಧದಷ್ಟು ಜನಸಂಖ್ಯೆ ಹೊಂದಿರುವ ಯುವಜನರದ್ದೇ. ಇವರಲ್ಲಿ ಬಹುತೇಕರು ಹದಿಹರೆಯದ ಬಿಕ್ಕಟ್ಟುಗಳನ್ನು ಎದುರಿಸಿ ಬದುಕುವುದನ್ನು ಕಲಿಯುವಲ್ಲಿ ವಿಫಲರಾಗುತ್ತಿದ್ದಾರೆಯೆ?

ಹದಿಹರೆಯದವರ ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳುವಲ್ಲಿ ಹೆತ್ತವರು, ಶಿಕ್ಷಕರು ಮತ್ತು ಸಮಾಜ ಶಾಸ್ತ್ರಜ್ಞರು ಸೋಲುತ್ತಿದ್ದಾರೆಯೆ? ಇತ್ತೀಚಿನ ಕೆಲವು ಘಟನೆಗಳನ್ನು ಗಮನಿಸಿದಾಗ ಇಂತಹದ್ದೊಂದು ಪ್ರಶ್ನೆ ಧುತ್ತೆಂದು ಎದುರಾಗುತ್ತದೆ. ಇತ್ತೀಚೆಗೆ ಬಹುತೇಕ ಅಪರಾಧ ಪ್ರಕರಣಗಳು ಹದಿಹರೆಯದವರಿಗೆ ಸಂಬಂಧಿಸಿದ್ದೇ ಆಗಿರುತ್ತವೆ. ಒಂದು ಚಕ್ರದ ಮೇಲೆ ಬೈಕ್ ಓಡಿಸುವ ಹುಚ್ಚಿಗೆ (ಡ್ರ್ಯಾಗ್‌ರೇಸ್) ಕಳೆದ ವಾರ ತರುಣನೊಬ್ಬ ಬಲಿಯಾದ. ಇನ್ನೊಂದು ಪ್ರಕರಣದಲ್ಲಿ ಮೂವರು ಗೆಳೆಯರು ಮಧ್ಯರಾತ್ರಿ ಭಾರೀ ವೇಗದಲ್ಲಿ ಮೂರು ಕಾರುಗಳನ್ನು ಒಟ್ಟೊಟ್ಟಿಗೇ ಓಡಿಸಿದಾಗ, ಡಿಕ್ಕಿ ಹೊಡೆದು ಒಂದು ಕಾರಿನಲ್ಲಿದ್ದ ಯುವಕ ಸ್ಥಳದಲ್ಲೇ ಮೃತಪಟ್ಟ. ರಾತ್ರಿ ಎರಡೂವರೆ ಗಂಟೆಗೆ ಈ ಹುಡುಗರು ಮನೆಯಿಂದ ಕಾರು ತೆಗೆದುಕೊಂಡು ಹೋದದ್ದು ಮನೆಯವರಿಗೆ ಗೊತ್ತೇ ಇರಲಿಲ್ಲವಂತೆ! ಮಗುದೊಂದು ಪ್ರಕರಣದಲ್ಲಿ ಹೊಸ ಬುಲೆಟ್ ಬೈಕ್ ಖರೀದಿಸಿದ ಸಂತಸದಲ್ಲಿದ್ದ ತರುಣನೊಬ್ಬ, ವಿದೇಶೀ ಬೈಕ್ ಓಡಿಸುವ ಗೆಳೆಯನ ಆಮಿಷಕ್ಕೆ ಬಲಿಬಿದ್ದು ಮನೆಯಲ್ಲಿ ತಿಳಿಸದೆ ಅವರ ಜತೆಗೆ ಹೋಗಿ, ಹಣಕ್ಕಾಗಿ ಕೊಲೆಯಾದ. ಎಲ್ಲ ಪ್ರಕರಣಗಳಲ್ಲೂ ಈ ಯುವಕರ ವಯಸ್ಸು 20ರ ಆಸುಪಾಸು ಎನ್ನುವುದು ಗಮನಿಸಬೇಕಾದ ಅಂಶ. ಸಾಹಸಗಳನ್ನು ಮಾಡಿ ಇನ್ನೊಬ್ಬರ ಮುಂದೆ ಹೆಚ್ಚುಗಾರಿಕೆ ತೋರಿಸಬೇಕೆಂಬ ಅದಮ್ಯ ತುಡಿತ ಈ ಎಲ್ಲ ಪ್ರಕರಣಗಳಲ್ಲೂ ಎದ್ದು ಕಾಣಿಸುವ ಅಂಶ. ಹರೆಯದಲ್ಲಿ ಇಂತಹದ್ದೊಂದು ತುಡಿತ ಬಹುತೇಕ ಎಲ್ಲ ಯುವಜನರಲ್ಲೂ ಇರುತ್ತದೆ. ಕೆಲವರಲ್ಲಿ ಅದು ಕ್ರಿಮಿನಲ್ ಕೃತ್ಯಗಳಿಗೆ ಉತ್ತೇಜನ ಕೊಡುತ್ತದೆ. ಈ ತುಡಿತಕ್ಕೆ ಸೂಕ್ತ ಮಾರ್ಗದರ್ಶನ ಮಾಡುವವರು ಇಲ್ಲದಿದ್ದರೆ, ಸಕಾಲಿಕ ಸಲಹೆಗಳನ್ನು ಕೊಡುವವರು ಇಲ್ಲದಿದ್ದರೆ ದುರಂತದಲ್ಲಿ ಮುಕ್ತಾಯ ಕಾಣುವುದು ಖಚಿತ.

ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇಕಡಾ 50ರಷ್ಟು ಮಂದಿ 25 ವರ್ಷ ವಯಸ್ಸಿನ ಕೆಳಗಿನವರು ಎಂದು ಇತ್ತೀಚಿನ ಸಮೀಕ್ಷೆ ಬಹಿರಂಗಪಡಿಸಿದೆ. ಅಂದರೆ ದೇಶದ ಅರ್ಧದಷ್ಟು ಜನಸಂಖ್ಯೆ ಹದಿಹರೆಯದ ತುಮುಲಗಳನ್ನು, ಬಿಕ್ಕಟ್ಟುಗಳನ್ನು ಎದುರಿಸಿ ಬದುಕುವುದನ್ನು ಕಲಿಯಲು ಯತ್ನಿಸುತ್ತಿದೆ. ಹದಿಹರೆಯ ದೈಹಿಕವಾಗಿಯೂ, ಮಾನಸಿಕವಾಗಿಯೂ ಹಲವು ತುಮುಲಗಳನ್ನು ಸಹಜವಾಗಿಯೇ ತಂದೊಡ್ಡುವ ಕಾಲ. ತಾನು ಬೆಳೆದಿದ್ದೇನೆ ಎಂಬುದನ್ನು ಪೋಷಕರಿಗೆ, ಗೆಳೆಯ/ ಗೆಳತಿಯರಿಗೆ ಅಥವಾ ಸಮಾಜಕ್ಕೆ ತೋರಿಸಿಕೊಡಬೇಕೆಂಬ ಹುಮ್ಮಸ್ಸು ಈ ವಯಸ್ಸಿನಲ್ಲಿ ಸಹಜ. ವೈದ್ಯರ ಪ್ರಕಾರ, ಮೆದುಳಿನ ಮುಂಭಾಗ ನಿರ್ಧಾರಗಳನ್ನು ಕೈಗೊಳ್ಳಲು ನೆರವಾದರೆ, ಹಿಂಭಾಗ ಭಾವನೆಗಳು ಮತ್ತು ತುಮುಲಗಳನ್ನು ನಿರ್ದೇಶಿಸುತ್ತದೆ. ಹದಿಹರೆಯದಲ್ಲಿ ಈ ಎರಡೂ ಭಾಗಗಳು ಪೂರ್ಣವಾಗಿ ಬೆಳೆದಿರುವುದಿಲ್ಲ. ಯಾವುದೇ ವಿಷಯಕ್ಕೆ ಸಂಬಂಧಿಸಿ ಸೂಕ್ತ ನಿರ್ಧಾರವನ್ನು ಕೈಗೊಳ್ಳಬೇಕಿದ್ದರೆ ಅವರ ಮುಂದೆ ಅಂತಹದ್ದೊಂದು ಪೂರ್ವನಿದರ್ಶನ ಇರಬೇಕು ಅಥವಾ ಯಾರಾದರೊಬ್ಬರು ಅನುಭವಸ್ಥರು ಮಾರ್ಗದರ್ಶನ ನೀಡಬೇಕು.

ಅನುಭವದ ಕೊರತೆಯಿಂದಾಗಿಯೇ ಹದಿಹರೆಯದಲ್ಲಿ ಯುವಜನರು ತಪ್ಪು ನಿರ್ಧಾರಗಳನ್ನು ಕೈಗೊಳ್ಳುತ್ತಾರೆ ಎನ್ನುವುದು ಸ್ಪಷ್ಟ. ಬೆಳೆಯುತ್ತಿರುವ ಮಕ್ಕಳ ಮೇಲೆ ಸದಾ ಒಂದು ಕಣ್ಣಿಡಲು ದುಡಿಮೆಯಲ್ಲಿ ತೊಡಗಿರುವ ಹೆತ್ತವರಿಗೆ ಪುರುಸೊತ್ತಿಲ್ಲ. ಮೀಸೆ ಮೊಳೆಯುವ ಹೊತ್ತಿಗೆ ಇತರರ ಸಲಹೆ ಕೇಳಲು ಬಹುತೇಕ ಮಕ್ಕಳು ತಯಾರಿಲ್ಲ. 'ನಾವು ಬೆಳೆದಿದ್ದೇವೆ, ಸ್ವತಂತ್ರವಾಗಿ ನಿರ್ಧಾರ ತೆಗೆದುಕೊಳ್ಳಬಲ್ಲೆವು' ಎನ್ನುವ ಅತಿಯಾದ ಆತ್ಮವಿಶ್ವಾಸವೂ ಹಲವರಲ್ಲಿ ಮನೆಮಾಡಿರುತ್ತದೆ. ತನ್ನದೇ ವಯಸ್ಸಿನ ಇನ್ನೊಬ್ಬನ ಸಾಹಸಗಳನ್ನು ಮೀರಿಸಬೇಕೆಂಬ ಅದಮ್ಯ ಆಕಾಂಕ್ಷೆ ಮಾತ್ರ  ಎದ್ದುಕಾಣುತ್ತದೆ. ಪೂರ್ವಾಪರಗಳನ್ನು ಪರಾಂಬರಿಸುವ ವಿವೇಚನೆ ಇರುವುದಿಲ್ಲ.

ಬದಲಾಗುತ್ತಿರುವ ಸಾಮಾಜಿಕ ಸ್ವರೂಪ, ಹದಿಹರೆಯದ ಮನೋಚಾಂಚಲ್ಯ, ಪೋಷಕರ ಜತೆಗೆ ಕಡಿಮೆಯಾಗಿರುವ ಸಂವಹನ, ಸಾಮಾಜಿಕ ಜಾಲತಾಣದ ಅತಿಬಳಕೆ, ವಿಭಕ್ತ ಕುಟುಂಬಗಳಿಂದಾಗಿ ಕುಟುಂಬದ ಸದಸ್ಯರ ಮಧ್ಯೆ ಸಂವಹನ ಇಲ್ಲವಾಗಿರುವುದು— ಹೀಗೆ ಈಗಿನ ಯುವತಲೆಮಾರು ಎದುರಿಸುತ್ತಿರುವ ಸಮಸ್ಯೆಗಳು ಹೆಚ್ಚು ಸಂಕೀರ್ಣವೂ, ವಿಭಿನ್ನವೂ ಆಗಿದೆ. ಪೋಷಕರು, ಸಮಾಜ ವಿಜ್ಞಾನಿಗಳು, ಶಿಕ್ಷಕರು ಈ ಸಂಕೀರ್ಣ ಸಮಸ್ಯೆಗಳನ್ನು ಅರ್ಥೈಸಿಕೊಂಡು ಪರಿಹಾರ ಸೂತ್ರಗಳನ್ನು ರೂಪಿಸಬೇಕಾಗಿದೆ. ಈ ನಿಟ್ಟಿನಲ್ಲಿ ಶಿಕ್ಷಕರು ಮತ್ತು ಪೋಷಕರಿಗೂ ತರಬೇತಿಯ ಅಗತ್ಯವಿದೆ. ಮನಸ್ಸಿನ ಮತ್ತು ಪರಿಸರದ ಒತ್ತಡಗಳನ್ನು ಮೀರಿ ನಿಂತು ಸಂದರ್ಭಕ್ಕೆ ಸರಿಯಾದ ನಿರ್ಧಾರಗಳನ್ನು ಕೈಗೊಳ್ಳುವಂತೆ ಯುವಜನರನ್ನು ಸಜ್ಜುಗೊಳಿಸುವುದು ಸಮಾಜದ ಎಲ್ಲರ ಜವಾಬ್ದಾರಿ. ನಿರ್ಧಾರಗಳನ್ನು ಕೈಗೊಳ್ಳುವಾಗ ನೈತಿಕ ನಿಲುವು ಮತ್ತು ಸಾಮಾಜಿಕ ಜವಾಬ್ದಾರಿಗೆ ಒತ್ತು ಕೊಡುವುದನ್ನೂ ಯುವಜನರಿಗೆ ಮನದಟ್ಟು ಮಾಡಬೇಕಿದೆ.

■ ಬಿ.ಎಂ.ಹನೀಫ್



ಈಶ್ವರ್